**ಸಿ ಸಿ 23/2020** ಪಿ.ಡಬ್ಲೂಃ 1

**ಸಾಕ್ಷಿಯನ್ನು ದಿಃ 03.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಈ.ಪಿ ವಕೀಲರಿಂದಃ-**

ಈ ಕೇಸ್ ನ ಆರೋಪಿ ಯಾವುದೆಲ್ಲಾ ದಾಖಲೆಗಳನ್ನು ಕೂಡಬೇಕೆಂದು ಅರ್ಜಿ ಹಾಕಿದ್ದ ಬಗ್ಗೆ ತಿಳಿದುಕೊಂಡಿದ್ದೆ. ಬ್ಯಾಂಕ್ ದಾಖಲೆಗಳು ಮತ್ತು ನನ್ನ ಕೆಲಸದ ಐಡಿ ಕಾರ್ಡ್ ಅನ್ನು ಕೇಳಿದ್ದರು. ನಾನು ವ್ಯವಸಾಯದ ಜಮೀನು ಇದೆ ಎಂದು, ಸಾಗುವಳಿ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದಿರಾ ಎಂದರೆ ಅದನ್ನು ಕೇಳಿರುವುದಿಲ್ಲ ಹಾಗಾಗಿ ಕೊಟ್ಟಿಲ್ಲ ಎನ್ನುತ್ತಾರೆ. ದಾಖಲೆ ಕೊಡಲು ನನಗ್ಯಾವುದೆ ತೊಂದರೆ ಇಲ್ಲ. ನಾನು ರೈತ ಎಂದು ತೋರಿಸಲು ದಾಖಲೆ ಹಾಜರು ಪಡಿಸಲು ಯಾವುದೆ ತೊಂದರೆ ಇಲ್ಲ. ನಾನು ಪತ್ರ ಕರ್ತ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ, ಅದನ್ನು ಹಾಜರು ಪಡಿಸಲು ನನಗ್ಯಾವುದೆ ತೊಂದರೆ ಇಲ್ಲ. ಈ ಕರ್ನಾಟಕ ಬ್ಯಾಂಕ್, ಎಸ್.ಬಿ.ಐ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿದ್ದೇನೆ ಎಂದು ಹೇಳಿದ್ದು, ಸದರಿ ಬ್ಯಾಂಕುಗಳ ಅಕೌಂಟ್ ಖಾತಾ ಎಕ್ಟ್ರಾಕ್ಟ್ ಹಾಜರು ಪಡಿಸಲು ತೊಂದರೆ ಇಲ್ಲ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ನ್ಯಾಯಾಲಯದಿಂದ ಆದೇಶ ಆಗಿತ್ತು ಎಂದರೆ ಸಾಕ್ಷಿ ಕರ್ನಾಟಕ ಬ್ಯಾಂಕ್ ನ ದಾಖಲೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನ್ಯಾಯಾಲಯದ ಆದೇಶದಂತೆ ನಾನು ಎಲ್ಲಾ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಬೇಕು ಎಂದರೆ ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ಸದರಿ ದಾಖಲೆಗಳನ್ನು ಮುಂದೆ ಹಾಜರು ಪಡಿಸುತ್ತೇನೆ.

**ಈ ಹಂತದಲ್ಲಿ ಸಾಕ್ಷಿಯೂ ದಾಖಲೆಗಳನ್ನು ಹಾಜರು ಪಡಿಸಲು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.